JULY 09, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕು,** ಅರಬೈಲ್ ಘಟ್ಟದ, ಬಳಗಾರ ಸಮೀಪ, ಅಂಕೋಲಾ–ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ, 52 ರಲ್ಲಿ, ಲಾರಿ ಹಾಗೂ ಪ್ರಯಾಣಿಕರಿದ್ದ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ, ಆರು ಜನ ಸ್ಥಳದಲ್ಲೇ ಸಾವನ್ನಪ್ಪಿ, ಮೂವರು ಗಂಭೀರವಾಗಿ ಗಾಯಗೊಂಡ ದುರ್ಘಟನೆ ವರದಿಯಾಗಿದೆ. ಚಾಲಕ ಸೇರಿ, ಒಟ್ಟು ಒಂಬತ್ತು ಜನರಿದ್ದ ವಾಹನದಲ್ಲಿ, ಮೃತಪಟ್ಟವರೆಲ್ಲರೂ ಧಾರವಾಡ ಮೂಲದವರಾಗಿದ್ದು, ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ಮೂವರನ್ನು, ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಗಂಭೀರವಾಗಿದೆ. ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ದೀಪನ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದ್ದಾರೆ. ಯಲ್ಲಾಪುರ ಪೊಲೀಸರು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

<><><>

**ಬೆಳಗಾವಿ ಜಿಲ್ಲೆಯ,** ಕೃಷ್ಣ, ಘಟಪ್ರಭಾ, ಮಲಪ್ರಭಾ, ದೂಧಗಂಗಾ ಹಾಗೂ ವೇದಗಂಗಾ ನದಿಗಳಲ್ಲಿ, ಒಳ ಹರಿವು ನಿರಂತರವಾಗಿ ಏರಿಕೆಯಾಗುತ್ತಿದೆ. ಚಿಕ್ಕೋಡಿ ತಾಲೂಕಿನ, ಕಲ್ಲೋಳ ಬ್ಯಾರೇಜ್ ಬಳಿ, ಕೃಷ್ಣ ನದಿಗೆ ಅಂದಾಜು 1 ಲಕ್ಷದ 25 ಸಾವಿರ ಕ್ಯೂಸೆಕ್ ನೀರು, ಹರಿದು ಬರುತ್ತಿದೆ. ಕೊಡಗಿನ ಬ್ರಹ್ಮಗಿರಿ ತಪ್ಪಲಿನ, ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ, ನೀರಿನ ಮಟ್ಟ ಏರಿಕೆಯಾಗಿದೆ. ಚಿಕ್ಕಮಗಳೂರಿನ, ಕೆಮ್ಮಣ್ಣುಗುಂಡಿ, ಕಲ್ಲತ್ತಿಗಿರಿ ಭಾಗದಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಶಿವಮೊಗ್ಗದಲ್ಲಿ, ಜನಜೀವನ ಅಸ್ತವ್ಯಸ್ಥಗೊಂಡಿದೆ.

<><><>

**ಶಿವಮೊಗ್ಗ ಜಿಲ್ಲೆಯಲ್ಲಿ,** ಸಾಮಾಜಿಕ ಅರಣ್ಯ ಸಂರಕ್ಷಣಾ ಅಭಿಯಾನ ಜರುಗುತ್ತಿದೆ. ವೃಕ್ಷಲಕ್ಷ ಆಂದೋಲನ ಸಹಯೋಗದಲ್ಲಿ ಆಯೋಜಿತ, ಈ ಜನಾಂದೋಲನದಲ್ಲಿ, ರಾಜ್ಯದ 31 ಜಿಲ್ಲೆಗಳ, 6 ಸಾವಿರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ, 15 ಸಾವಿರ ಸಾಮಾಜಿಕ ಅರಣ್ಯ ವನಗಳ, ಸದ್ಯದ ಸ್ಥಿತಿಗತಿ ಅಧ್ಯಯನಕ್ಕೆ, ಯೋಜಿಸಲಾಗಿದೆ. ಅರಣ್ಯ ಸೇವಕರು ಎಂಬ, ಸ್ವಯಂಸೇವಕರ ಪಡೆಯ ಮೂಲಕ, 2005–6 ರಲ್ಲಿ, ಪುನಃ ವನೀಕರಣ ಕೈಗೊಳ್ಳಲಾಗಿತ್ತು. ಶಿವಮೊಗ್ಗ ಜಿಲ್ಲೆ ಒಂದರಲ್ಲೇ, 8 ಸಾವಿರದ 3ನೂರಾ 25 ಎಕರೆ ವಿಸ್ತಾರದ, 264 ಸಾಮಾಜಿಕ ಅರಣ್ಯ ವನಗಳಿವೆ. ಈ ಕುರಿತು, ಗ್ರಾಮ ಭಾರತಿ ಟ್ರಸ್ಟ್ ವಿಶ್ವಸ್ಥ, ಹನಿಯಾ ರವಿ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ಟ್ರಸ್ಟಿ ಹನಿಯಾ ರವಿ ಧ್ವನಿ 40 ಸೆಕೆಂಡುಗಳು**

<><><>

**ಮಂಡ್ಯ ಜಿಲ್ಲೆ, ಕೃಷ್ಣರಾಜ ಸಾಗರ ಅಣೆಕಟ್ಟೆಯಲ್ಲಿ,** ನೀರಿನ ಪ್ರಮಾಣ, ಗಣನೀಯವಾಗಿ ಏರಿಕೆಯಾಗುತ್ತಿದೆ. ಒಟ್ಟು 124 ದಶಾಂಶ 8–0 ಅಡಿ ಎತ್ತರದ ಅಣೆಕಟ್ಟೆಯಲ್ಲಿ, ಇಂದಿನ ನೀರಿನ ಮಟ್ಟ, 85 ದಶಾಂಶ 6–6. ಮಂಡ್ಯ ಜಿಲ್ಲೆಯ ಕೃಷಿಗೆ ನೀರು, ಕಾವೇರಿ ನದಿ ನೀರನ್ನು, ಇನ್ನಿತರೆ ಭಾಗಕ್ಕೆ ಹಂಚುವ ನಿಟ್ಟಿನಲ್ಲಿ, ಜಲಸಂಪನ್ಮೂಲ ಖಾತೆ ಸಚಿವ, ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ, ಕಾವೇರಿ ಸಲಹಾ ಸಮಿತಿ ಸಭೆ, ನಾಳೆ ಮಂಡ್ಯದಲ್ಲಿ ನಡೆಯಲಿದೆ.

<><><>

**ಪ್ರಾದೇಶಿಕ ಆಹಾರ ಭದ್ರತೆ ಮತ್ತು ಕೃಷಿ ಸಹಕಾರವನ್ನು** ಬಲಪಡಿಸುವ ನಿಟ್ಟಿನಲ್ಲಿ, ಭಾರತ ಮತ್ತು ಇಂಡೋನೇ ್ಯ, ಮಹತ್ವದ ಹೆಜ್ಜೆ ಇರಿಸಿವೆ. ಇತ್ತೀಚೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂಡೋನೇ ್ಯಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ಒಪ್ಪಂದದ ಭಾಗವಾಗಿ, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ, ಖ್ಯಾತ ಗೋಧಿ ತಳಿ ಶಾಸ್ತ್ರಜ್ಞ, ಡಾಕ್ಟರ್ ಆರ್.ಆರ್. ಹಂಚಿನಾಳ ಹಾಗೂ ತಂಡ ಅಭಿವೃದ್ಧಿ ಪಡಿಸಿದ, ಉನ್ನತ ಗುಣಮಟ್ಟದ ಡಿ.ಡಬ್ಲ್ಯೂ.ಆರ್. 162 ಗೋಧಿ ಬೀಜಗಳನ್ನು ಇಂಡೋನೇ ್ಯಕ್ಕೆ ಪೂರೈಸಲು, ನಿರ್ಧರಿಸಲಾಗಿದೆ.

<><><>

**ವಿಜಯಪುರ ಜಿಲ್ಲೆಯಲ್ಲಿ,** 5 ಲಕ್ಷ 98 ಸಾವಿರದ 449 ಜನ ಅಸಂಘಟಿತ ಕಾರ್ಮಿಕರಿಗೆ, 'ಇ ಶ್ರಮ' ಗುರುತಿನ ಚೀಟಿ ನೀಡಲಾಗಿದೆ ಎಂದು, ಜಿಲ್ಲಾ ಕಾರ್ಮಿಕ ಅಧಿಕಾರಿ ರಮೇಶ ಸುಂಬಡ, ತಿಳಿಸಿದ್ದಾರೆ. ಅಸಂಘಟಿತ ವಲಯದ ಕಾರ್ಮಿಕರ, ರಾಷ್ಟ್ರೀಯ ದತ್ತಾಂಶವನ್ನು ಸಿದ್ಧಪಡಿಸಲು, ಕೇಂದ್ರ ಸರ್ಕಾರದ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, 'ಇ – ಶ್ರಮ' ಪೋರ್ಟಲ್‌ನ್ನು ಅಭಿವೃದ್ಧಿ ಪಡಿಸಿದೆ. ಕೇಂದ್ರ ಸರ್ಕಾರ ಗುರುತಿಸಿದ, ಒಟ್ಟು 406 ವರ್ಗಗಳ, ಅಸಂಘಟಿತ ವಲಯದ ಕಾರ್ಮಿಕರು, ಹೆಸರು ನೋಂದಾಯಿಸಬಹುದಾಗಿದೆ.

<><><>

**ಕಾರ್ಯನಿರತ ಸ್ಥಳಗಳಲ್ಲಿ,** ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ, ಜಾಗೃತಿ ಕಾರ್ಯಾಗಾರ, ಆಕಾಶವಾಣಿ ಧಾರವಾಡ ಕೇಂದ್ರದ ಸಿಬ್ಬಂದಿಗಾಗಿ, ಇಂದು, ಶಾಲ್ಮಲಾ ಸಭಾಂಗಣದಲ್ಲಿ ಇಡೀ ದಿನ ಜರುಗಲಿದೆ. ಕರ್ನಾಟಕ ವಿಶ್ವವಿದ್ಯಾಲಯದ, ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯೆ, ಡಾಕ್ಟರ್ ಎಸ್.ಆರ್.ಮಂಜುಳಾ ಹಾಗೂ ರ್‍ಯಾಪಿಡ್ ಸ್ವಯಂಸೇವಾ ಸಂಸ್ಥೆಯ, ಕಾರ್ಯದರ್ಶಿ ವಾಣಿ ಪುರೋಹಿತ, ಸಂಪನ್ಮೂಲ ವ್ಯಕ್ತಿಗಳಾಗಿ, ಪಾಲ್ಗೊಂಡಿದ್ದಾರೆ. ತಾಂತ್ರಿಕ ವಿಭಾಗದ ಉಪಮಹಾನಿರ್ದೇಶಕ ಅರುಣ ಪ್ರಭಾಕರ, ಕಾರ್ಯಕ್ರಮ ಮುಖ್ಯಸ್ಥರಾದ, ಮಂಜುಳಾ ಪುರಾಣಿಕ ಹಾಗೂ ವಿವಿಧ ವಿಭಾಗಗಳ ಸಿಬ್ಬಂದಿ, ಲಿಂಗ ಸಂವೇದನೆ, ಲಿಂಗ ಸೂಕ್ಷ್ಮತೆ ಹಾಗೂ ಕಾರ್ಯನಿರತ ಸ್ಥಳಗಳಲ್ಲಿ, ಮಹಿಳೆಯರೊಂದಿಗೆ ಘನತೆಯ ನಡಾವಳಿ ಕುರಿತ, ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

**ರಾಜ್ಯದ ಎಲ್ಲ ಪದವಿ ಹಾಗೂ** ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ, ವಾರಕ್ಕೆ ನಾಲ್ಕು ಗಂಟೆಗಳ, ಕನ್ನಡ ಬೋಧನೆ ಕಡ್ಡಾಯಗೊಳಿಸುವಂತೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಉನ್ನತ ಶಿಕ್ಷಣ ಇಲಾಖೆ ಮುಖ್ಯಸ್ಥರಿಗೆ ಪತ್ರ ಬರೆದಿರುವ, ಪ್ರಾಧಿಕಾರದ ಅಧ್ಯಕ್ಷ, ಡಾಕ್ಟರ್ ಪುರುಷೋತ್ತಮ ಬಿಳಿಮಲೆ, ಭಾಷೆ ಎಂಬುದು, ಸಾಮಾಜಿಕ ಮೌಲ್ಯ ಮತ್ತು ಚಿಂತನೆಯನ್ನು, ಮುಂದಿನ ತಲೆಮಾರಿಗೆ, ವರ್ಗಾಯಿಸುವ ಮಹತ್ವದ ಮಾಧ್ಯಮವಾಗಿದೆ. ಭಾಷಾ ಬೋಧನೆಗೆ, ವಿಶೇಷ ಪ್ರಾಮುಖ್ಯತೆ ನೀಡುವ, ಅವಶ್ಯಕತೆ ಇದೆ, ಎಂದಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**